ನಂದಿನಿ ಉತ್ಪನ್ನಗಳು

1177(885); ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) ಕಳೆದ ಮೂರು ವರ್ಷಗಳಲ್ಲಿ ನಂದಿನಿ ಉತ್ಪನ್ನಗಳ ಬಿಕರಿಯಿಂದ ರಾಜ್ಯಕ್ಕೆ ಬಂದಿರುವ ಆದಾಯ ಎಷ್ಟು (ವರ್ಷಾವಾರು ವಿವರಣೆ ನೀಡುವುದು)?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು)

ಅ) ಕಳೆದ 3 ವರ್ಷಗಳಲ್ಲಿ ನಂದಿನಿ ಉತ್ಪನ್ನಗಳ ಮಾರಾಟದಿಂದ ರಾಜ್ಯಕ್ಕೆ ಬಂದಿರುವ ಆದಾಯದ ವಿವರಗಳು ಈ ಕೆಳಕಂಡಂತಿವೆ:

ಆರ್ಥಿಕ ವರ್ಷ	ಆದಾಯ (₹ ಲಕ್ಷಗಳಲ್ಲಿ)
2012–13	7438.48
2013–14	13017.66
2014–15	15536.89
ಒಟ್ಟು	**35993.03**

ಮುಜರಾಯಿ ದೇವಸ್ಥಾನಗಳಿಂದ ಬಂದಿರುವ ಆದಾಯ

1178(886); ಮಾನ್ಯ ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ ಇರುವ ಮುಜರಾಯಿ ದೇವಾಲಯಗಳಿಂದ ಬಂದಿರುವ ಆದಾಯ ಎಷ್ಟು (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು)

ಅ) ರಾಜ್ಯದ ಮುಜರಾಯಿ ವ್ಯಾಪ್ತಿಗೆ ಒಳಪಟ್ಟ ದೇವಸ್ಥಾನಗಳನ್ನು ಆದಾಯಕ್ಕನುಗುಣವಾಗಿ ಪ್ರವರ್ಗ 'ಎ' 'ಬಿ' ಮತ್ತು 'ಸಿ' ಎಂದು ವರ್ಗೀಕರಿಸಲಾಗಿರುತ್ತದೆ. 'ಎ' ಮತ್ತು 'ಬಿ' ದೇವಸ್ಥಾನಗಳ ಆದಾಯದ ವಿವರ ಆಗಾಧ ಪ್ರಮಾಣದಲ್ಲಿದ್ದು, ಪ್ರತ್ಯೇಕವಾಗಿ ಸಂಬಂಧಪಟ್ಟ

ಶಾಸಕರಿಗೆ ಒದಗಿಸಲಾಗುವುದು. ಉಳಿದಂತೆ 'ಸಿ' ವರ್ಗದ ದೇವಸ್ಥಾನಗಳ ಆದಾಯವು ರೂ.5-00 ಲಕ್ಷಕ್ಕಿಂತ ಕಡಿಮೆ ಇರುತ್ತದೆ.

ಪರವಾನಿಗೆ ಪಡೆದ ಮದ್ಯದ ಅಂಗಡಿಗಳು

1179(887); ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) ತುಮಕೂರು ನಗರ ವಿಧಾನ ಸಭಾ ಕ್ಷೇತ್ರದಲ್ಲಿ ಪರವಾನಿಗೆ ಪಡೆದಿರುವ ಮದ್ಯದ ಅಂಗಡಿಗಳೆಷ್ಟು;

ಆ) ಎಂ.ಎಸ್.ಐ.ಎಲ್. ವತಿಯಿಂದ ಮದ್ಯದಗಂಡಿ ತೆರೆಯಲು ಇರುವ ನಿಯಮಗಳಾವುವು;

ಇ) ಈ ಕ್ಷೇತ್ರದಲ್ಲಿ ಎಂ.ಎಸ್.ಐ.ಎಲ್. ವತಿಯಿಂದ ಮದ್ಯದಂಗಡಿ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿ)

ಅ) ತುಮಕೂರು ನಗರ ವಿಧಾನ ಸಭಾ ಕ್ಷೇತ್ರದಲ್ಲಿ ನೀಡಲಾದ ಪರವಾನಿಗೆಗಳ ವಿವರ ಕೆಳಕಂಡಂತಿದೆ.

ಸನ್ನದಿನ ವಿಧ	ಸಂಖ್ಯೆ
ಸಿಎಲ್-2	33
ಸಿಎಲ್-4	02
ಸಿಎಲ್-7	02
ಸಿಎಲ್-9	33
ಸಿಎಲ್-11ಸಿ	01
ಆರ್‌ವಿಬಿ	02
ಒಟ್ಟು	73

ಆ) ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968, ರ ನಿಯಮ 3(11ಸಿ) ಮತ್ತು ನಿಯಮ 8 ರಂತೆ ಹಾಗೂ ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು, 1967, ರ ನಿಯಮ